**ಸಾಕ್ಷಿಯನ್ನು ದಿನಾಂಕಃ 19-09-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ**

8. ದಾವಾ ಅಸ್ತಿಯ ಪೂರ್ವಕ್ಕೆ ಕೆಂಚಪ್ಪನ ಜಮೀನು ಇದೆ ಅಂದರೆ ಸರಿ. ಮೊದಲು ಕೆಂಚಪ್ಪನ ತಂದೆ ಹಾಲಪ್ಪನ ಜಮೀನು ಇತ್ತು ಅಂದರೆ ಸರಿ. ಪಶ್ಚಿಮಕ್ಕೆ ಹಾವಳಿ ಸಿದ್ದಪ್ಪನ ಜಮೀನು ಇದೆ ಅಂದರೆ ಸರಿ. ಅವರು ತವಡೂರು ಅಂಜಿನಪ್ಪ ಮತ್ತು ಹಾಲಪ್ಪನಿಗೆ ಖರೀದಿಗೆ ಕೊಟ್ಟಿರುವರು ಅಂದರೆ ಸರಿ. ಉತ್ತರಕ್ಕೆ ಅದೇ ಸರ್ವೆ ನಂಬರು ಷೈಕಿ ಹಾಲಪ್ಪನ ಜಮೀನು ಇದೆ ಅಂದರೆ ಸರಿ. ದಕ್ಷಿಣಕ್ಕೆ ಹಾಲಪ್ಪನ ಜಮೀನು ಇದೆ ಅಂದರೆ ಸರಿ.

9. ದಾವಾ ಅಸ್ತಿಯ ಪಶ್ಚಿಮ ದಿಕ್ಕಿಗೆ ಇರುವ ಜಮೀನಿನ ಸರ್ವೆ ನಂಬರು 104/3 ಎಂದು ಈಗ ಅಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಪಹಣಿಯನ್ನು ನಾನು ಹಾಜರು ಪಡಿಸಿರುವುದಿಲ್ಲ ಅಂದರೆ ಸರಿ. ನಿಡಿ 27 ಮತ್ತು 28 ನಕಾಶೆ ಸಮರ್ಪಕವಾಗಿರುತ್ತವೆ. ಸರ್ವೆ ನಂ 106/2 ಜಮೀನನ್ನು ವಾದಿಯು ಕರಿಯಪ್ಪನಿಂದ ಖರೀದಿಸಿರುವರು ಅಂದರೆ ಸರಿಯಲ್ಲ. ಈಗಲೂ ದಾವಾ ಅಸ್ತಿ ವಾದಿಯರ ಸ್ವಾಧೀನ ಅನುಭದಲ್ಲಿರುವುದು ಅಂದರೆ ಸರಿಯಲ್ಲ. ದಾವಾ ಶೆಡೂಲಿನಲ್ಲಿ ಕಾಣಿಸಿರುವ ಚೆಕ್ಕು ಬಂದಿಗಳು ಸಮರ್ಪಕವಾಗಿದ್ದರೂ ಸಹ ಸರಿ ಇರುವುದಿಲ್ಲವೆಂದು ಸುಳ್ಳು ಸಾದನೆ ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ.

10. ನನ್ನ ತಂದೆ ಕರಿಯಪ್ಪ ಜೀವಂತ ಇರುವರು. ನಿಪಿ 2 ರಲ್ಲಿ ಕಂಡು ಬರುವ ಹೆಬ್ಬಟ್ಟಿನ ಗುರುತು ನನ್ನ ತಂದೆಯದ್ದಾಗಿರುತ್ತದೆ ಅಂದರೆ ಸರಿಯಲ್ಲ. ನನ್ನ ತಂದೆಯ ಹೆಬ್ಬಟ್ಟನ ಸ್ಯಾಂಪಲ್ಲನ್ನು ನ್ಯಾಯಾಲಯದ ಮುಂದೆ ಅವರನ್ನು ಕರೆಯಿಸಿ ವೈಜ್ಞಾನಿಕ ಪರೀಕ್ಷೆಗೆ ಕಳುಹಿಸಲು ಸಾಧ್ಯ ಇರುವುದಿಲ್ಲ ಕಾರಣ ಅವರು ಓಡಾಡುವ ಸ್ತಿತಿಯಲ್ಲಿರುವುದಿಲ್ಲ. ನನ್ನ ಅಜ್ಜನ ಹೆಸರು ಹನುಮಂತಪ್ಪ ಎಂದು

**ಸಾಕ್ಷಿಯ ಸಹಿ** 19.09.2025

ಇರುವುದು. ವಾದಿಯ ಹೆಸರಿಗೆ ಕರಿಯಪ್ಪನು ಖರೀದಿ ಪತ್ರ ಮಾಡಿಕೊಡುವ ಕಾಲಕ್ಕೆ ದಾವಾ ಅಸ್ತಿಯು ನನ್ನ ಅಜ್ಜನಾದ ಹನುಮಂತಪ್ಪನ ಹೆಸರಿಗೆ ಇತ್ತು ಅಂದರೆ ಸರಿ.

11. ತದನಂತರ ಅದು ನನ್ನ ತಂದೆ ಕರಿಯಪ್ಪನ ಹೆಸರಿಗೆ ಅಂದರೇ 1 ನೇ ಪ್ರತಿವಾದಿ ಹೆಸರಿಗೆ ಬಂದಿತ್ತು ಅಂದರೆ ಸರಿಯಲ್ಲ. ಹನುಮಂತಪ್ಪನೂ ಕೂಡ ಖರೀದಿ ಪತ್ರ ಬರೆದುಕೊಂಡು ಒಪ್ಪಿಗೆ ಸೂಚಿಸಿರುವನು ಅಂದರೆ ಸರಿಯಲ್ಲ. ನಿಪಿ 2 ಖರೀದಿ ಪತ್ರವು ನನ್ನ ತಂದೆ ಕರಿಯಪ್ಪ ಹಾಗೂ ನನ್ನ ಅಜ್ಜ ಹನುಮಂತಪ್ಪ ಇಬ್ಬರೂ ಒಪ್ಪಿಗೆ ಕೊಟ್ಟು ಬರೆದುಕೊಟ್ಟಿರುವ ಪತ್ರವಾಗಿರುತ್ತದೆ ಅಂದರೆ ಸರಿಯಲ್ಲ. ನನ್ನ ತಂದೆ ಕರಿಯಪ್ಪ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯ ಬಯಲಾಗುತ್ತದೆ ಎಂಬ ಕಾರಣಕ್ಕಾ ನಾನು ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**19-09-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 19.09.2025